REGD.NEWS PAPER RNI KARKAN/50347/1988
RNI.Reg.No. KA/BGW/1861/2024-2026
Licenced to post without Pre-payment
Registered Regn.No. PMG/BG/WPP-411/2024-2026
Posted at BANGALORE PSO, MYSORE ROAD,
BANGALORE – 560026

Date of publication 18th of every month
Permitted to post on 20th or 21st

ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ)

# ವಾರ್ತಾಪತ್ರ

ಕನ್ನಡ ಮಾಸ ಪತ್ರಿಕೆ



ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009
ದೂರವಾಣಿ : 080–22206151 – 22206152 – 22206153
Website: www.kavms.com E-mail: kavmss@gmail.com

ಸಂಪಾದಕರು:
ರಾ.ಪ. ರವಿಶಂಕರ್

ಕಾರ್ಯಾಲಯ ಸಮಯ { ವಾರದ ದಿನಗಳಲ್ಲಿ ಬೆಳಿಗ್ಗೆ : 10.30 ರಿಂದ ಸಂಜೆ: 5.30
ಭಾನುವಾರ : ಬೆ. 10.30 ರಿಂದ ಮಧ್ಯಾಹ್ನ : 3.00ರ ವರೆಗೆ

ಸಂಪುಟ : ೩೮ ಆಗಸ್ಟ್ ೨೦೨೫ ಬೆಲೆ : 1 ರೂ. ಪುಟಗಳು : 4 ಸಂಚಿಕೆ : ೦೮

## ಅಧ್ಯಕ್ಷರ ನುಡಿ

### ಕಳೆದ ಸಂಚಿಕೆಯಿಂದ...

**1987ರಲ್ಲಿ ಡಾ॥ ಕೆ.ಎಮ್.ರಂಗಧಾಮ ಶೆಟ್ಟಿಯವರು ಪ್ರಜಾಪ್ರಭುತ್ವ** ವ್ಯವಸ್ಥೆಯಲ್ಲಿ ಆಯ್ಕೆಯಾದ ಪ್ರಥಮ ವ್ಯಕ್ತಿ, ಏನಾದರೂ ಸಾಧಿಸಬೇಕೆಂಬ ಆಸಕ್ತಿ ಇದ್ದರೂ ಸಹ ಅಂದಿನ ಪರಿಸ್ಥಿಗಳು ಅವರ ಆಶೋತ್ತರಗಳನ್ನು ಈಡೇರಿಸಿಕೊಳ್ಳಲು ಸಹಕರಿಸಲಿಲ್ಲ. 1908ರಲ್ಲಿ ಆರಂಭವಾದ ಮಹಾಸಭೆಗೆ 1927ರಲ್ಲಿ ಮೈಸೂರು ಸಂಸ್ಥಾನದ ಪರಮ **ಪೂಜ್ಯ ಮಹಾರಾಜರಾಗಿದ್ದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರಿಂದ ಪಡೆದು ಕೊಂಡಿದ್ದ 52000 ಚದರ ಅಡಿಗಳ ವಿಶಾಲವಾದ ಜಾಗದಲ್ಲಿ** 30ಜನ ವಿದ್ಯಾರ್ಥಿಗಳಿಗಾಗಿ ಕಟ್ಟಡ ಹಾಸ್ಟೆಲ್ ಹೊರತುಪಡಿಸಿ, ಹಾಸ್ಟೆಲ್ ಮುಂಭಾಗದಲ್ಲಿ ಇದ್ದ ಖಾಲಿ ಜಾಗದಲ್ಲಿ ಮಳಿಗೆಗಳನ್ನು ನಿರ್ಮಾಣ ಮಾಡಬೇಕೆಂಬ ತೀರ್ಮಾನ 1956ರಲ್ಲಿ ಮೈಸೂರು ನಗರದಲ್ಲಿ ನಡೆದ ಸಭೆಯಲ್ಲಿ ತೆಗೆದು ಕೊಂಡಿದ್ದರೂ ಕಾಲ ಕೂಡಿ ಬರಲೇ ಇಲ್ಲ. ಹಿರಿಯರು ಹೇಳುವಂತೆ **ಪ್ರಯತ್ನವನ್ನು ಎಂದಿಗೂ ನಿಲ್ಲಿಸಬೇಡಿ, ಭರವಸೆಯನ್ನು ಯಾವತ್ತು ಕಳೆದುಕೊಳ್ಳಬೇಡಿ, ಒಳ್ಳೆಯ ದಿನಗಳು ಬಂದೇ ಬರುತ್ತದೆ** ಎಂಬಂತೆ 11/04/1993ರಲ್ಲಿ ಮಹಾಸಭೆ ಕಾರ್ಯಕಾರಿ ಸಮಿತಿ ಸದಸ್ಯರಿಗೆ ಚುನಾವಣೆಗಳಲ್ಲಿ ಪುನಃ ಸನ್ಮಾನ್ಯ ಶ್ರೀ ಗುಂಡಯ್ಯ ಶ್ರೇಷ್ಠಿಯವರು ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಿದರು, ಪ್ರತಿ ಸ್ಪರ್ಧಿಯಾಗಿ ರಾಯಚೂರು ನಗರದ ಕೈಗಾರಿಕೋಧ್ಯಮಿ ಶ್ರೀ ಮೈಲಾಪುರ ಸುಬ್ರಮಣ್ಯರವರು ಸ್ಪರ್ಧಿಗಳಿದ್ದರು, ಮಹಾಸಭೆ ಎರಡನೇ ಚುನಾವಣೆಗಳಲ್ಲಿಯೂ ಸಹ ಶ್ರೀ ಗುಂಡಯ್ಯ ಶ್ರೇಷ್ಠಿಯವರಿಗೆ ಅಧ್ಯಕ್ಷರಾಗುವ ಯೋಗ ಕೂಡಿ ಬರಲೇ ಇಲ್ಲ. **ಶ್ರೀ ಮೈಲಾಪುರ ಸುಬ್ರಮಣ್ಯರವರು ಮಹಾಸಭೆಯ 1993 ರಿಂದ ಮುಂದಿನ** 3 ವರ್ಷಗಳ ಅವಧಿಗೆ ಅಧ್ಯಕ್ಷರಾಗಿ ಬಹುಮತಗಳಿಂದ ಆಯ್ಕೆಯಾದರು. ಕೈಗೆತ್ತಿಕೊಂಡ ಕೆಲಸಗಳನ್ನು ಎಂತಹ ಪರಿಸ್ಥಿಯಲ್ಲೂ ಸಾಧಿಸಿ ಸಮಾಜಕ್ಕೆ ಅರ್ಪಣೆ ಮಾಡಿರುವ ಶ್ರೀ ಮೈಲಾಪುರ ಸುಬ್ರಮಣ್ಯಂರವರ ಕಾರ್ಯಕ್ಷಮತೆಗೆ ಮತ್ತು ಹೋರಾಟಗಳ ಫಲಕ್ಕೆ ಮಂತ್ರಾಲಯದ ಅತಿಥಿ ಗೃಹ ಸಾಕ್ಷಿಯಾಗಿದೆ. ಇಂತಹ **ದಿಟ್ಟ ವ್ಯಕ್ತಿಯ ಆಗಮನದಿಂದ ಮಹಾಸಭೆಗೆ ಹೊಸತನ ಬರುತ್ತದೆ, ಸಮಾಜದ ಹಲವಾರು ದಶಕಗಳ ಕನಸು ಈಡೇರುತ್ತದೆ** ಎಂಬ ಜನಮನದ ಕನಸು ನನಸಾಗುವ ನಿಟ್ಟಿನಲ್ಲಿ ಕಾರ್ಯನಿರ್ವಹಣೆಗೆ ಪಣತೊಟ್ಟರು, ಆದರೆ ಈಗಾಗಲೇ ಮಹಾಸಭೆ ಜಾಗದ ವಿಷಯವಾಗಿ ತಗಾದೆ ತೆಗೆದು ಮೊಕದಮ್ಮೆ ಹೂಡಿದ್ದ ಬೆಂಗಳೂರು ಆರ್ಯವೈಶ್ಯ ಮಂಡಳಿಯವರು ಮತ್ತಷ್ಟು ಚುರುಕಾದರು, ಅಭಿವೃದ್ಧಿ ಕಾರ್ಯಗಳು ತಡೆಯಲು ನಿರಂತರ ಅಡ್ಡಿ ಆತಂಕಗಳನ್ನು ಒಡ್ಡುತ್ತ ಬಂದರು, ಇಷ್ಟಲ್ಲದೇ ಶ್ರೀ ಮೈಲಾಪುರ ಸುಬ್ರಮಣ್ಯಂರವರ ಆಡಳಿತದಲ್ಲಿ ನಮ್ಮ ಅಂಗ ಸಂಸ್ಥೆಯಾಗಿದ್ದ ಕರ್ನಾಟಕ ಆರ್ಯವೈಶ್ಯ ಮಹಾಸಭೆ ಚಾರಿಟೇಬಲ್ ಟ್ರಸ್ಟ್‌ನೊಂದಿಗೆ ಮೂಡಿದ್ದ ಮೈಮನಸು ತಾರಕಕ್ಕೇರಿ ನ್ಯಾಯಾಲಯದ ಮೆಟ್ಟಿಲು ಹತ್ತಿತು. ಅಂದಿನ ಯುವಜನ ಮಹಾಸಭಾ ಅಧ್ಯಕ್ಷರಾಗಿದ್ದ ಶ್ರೀ ಡಿ.ಎಲ್.ಮಂಜುನಾಥ್‌ರವರ ಮದ್ಯಸ್ಥಿಕೆಯಿಂದ ಪರಸ್ಪರ ಒಪ್ಪಂದ, ಒಡಂಬಡಿಕೆಗಳ ಮೂಲಕ ಸಮಸ್ಯೆ ಪರಿಹಾರವಾಗಿ, ಚಾರಿಟೇಬಲ್ ಟ್ರಸ್ಟ್‌ನ ವತಿಯಿಂದ ಮಹಾಸಭೆಗೆ ರೂ. 5ಲಕ್ಷಗಳ ಹಣ ನೀಡಲು ಮತ್ತು ಚಾರಿಟೇಬಲ್ ಟ್ರಸ್ಟ್‌ಗೆ ಮಹಾಸಭೆಯ 13 ಪದಾಧಿಕಾರಿಗಳನ್ನು ಟ್ರಸ್ಟಿಗಳನ್ನು ಶಾಶ್ವತವಾಗಿ ಪಡೆದುಕೊಳ್ಳಬೇಕೆಂಬ ಷರತ್ತುಗಳೊಂದಿಗೆ ಮಾನ್ಯ ಘನ ನ್ಯಾಯಾಲಯದಲ್ಲಿ ಮೊಕದಮ್ಮೆಯನ್ನು ಇತ್ಯರ್ಥ ಪಡಿಸಿಕೊಳ್ಳಲಾಯಿತು. ಇದರೊಂದಿಗೆ ಮಹಾಸಭೆಯಿಂದ ಆರಂಭವಾಗಿ ಅದರ ಆಶ್ರಯದಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದ ಕರ್ನಾಟಕ ಆರ್ಯವೈಶ್ಯ ಮಹಾಸಭೆ ಚಾರಿಟೇಬಲ್ ಟ್ರಸ್ಟ್ ಸಹ ಮಹಾಸಭೆಯಿಂದ ಹೊರನಡೆದು ಸ್ವತಂತ್ರ ಸಂಸ್ಥೆಯಾಯಿತು.

ನಿರಂತರ ಸಮಸ್ಯೆಗಳ ನಡುವೆಯು ಛಲಬಿಡದ ತಿವಿಕ್ರಮನಂತೆ ಶ್ರೀ ಮೈಲಾಪುರ ಸುಬ್ರಮಣ್ಯಂ ತಂಡದವರು ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ರಾಜ್ಯವ್ಯಾಪಿ ಸಂಚರಿಸಿ



ಹಣ ಸಂಗ್ರಹಣೆ ಮಾಡಿ, ಜೊತೆ ಜೊತೆಗೆ ಹೊಸ ಹಾಸ್ಟೆಲ್, ಅತಿಥಿಗೃಹ, ಸಭಾಂಗಣ ನಿರ್ಮಾಣಕ್ಕೆ ಅವಶ್ಯವಿರುವ ಕಾನೂನು ಪ್ರಕ್ರಿಯೆಗಳನ್ನು ಮುಗಿಸಿ, ಬೆಂಗಳೂರು ನಗರದ ಪ್ರತಿಷ್ಠಿತ ವಾಣಿಜ್ಯೋದ್ಯಮಿಶ್ರೀ ಎಸ್. ರಾಮಮೂರ್ತಿಯವರನ್ನು ಕಟ್ಟಡ ಸಮಿತಿ ಅಧ್ಯಕ್ಷರನ್ನಾಗಿ ಮಾಡಿ, ಕಟ್ಟಡ ಕಾಮಗಾರಿಗಳನ್ನು ಕೈಗಿತ್ತಿ ಕೊಳ್ಳಲಾಯಿತು. ಅಂದಿಗೆ ಸುಮಾರು 50ಲಕ್ಷ ರೂಪಾಯಿಗಳ ಬೃಹತ್ ಯೋಜನೆ, ಮಹಾಸಭೆಯಲ್ಲಿ ಆರ್ಥಿಕ ಸ್ಥಿತಿ ಖಾಲಿ ಖಾಲಿ, ಕಾರ್ಯದರ್ಶಿಗಳಾಗಿದ್ದ ಶ್ರೀ ಜಿ. ಕೃಷ್ಣಮೂರ್ತಿ, ಕೋಶಾಧ್ಯಕ್ಷರಾಗಿದ್ದ, ಶ್ರೀ ಎನ್ ಎಸ್ ಶ್ರೀನಿವಾಸಮೂರ್ತಿ, ಹಿರಿಯ ಉಪಾಧ್ಯಕ್ಷರಾಗಿದ್ದ ತಲಂ ಶ್ರೀನಿವಾಸ ಮೂರ್ತಿ ಹಾಗೂ ತಂಡದವರು ಶ್ರೀ ಮೈಲಾಪುರ ಸುಬ್ರಮಣ್ಯಂರವರೊಂದಿಗೆ, ಕೈ ಜೋಡಿಸಿದರು, ಊರೂರು ಸುತ್ತಿದರು, ದಾನಿಗಳಿಂದ ಹಣ ಸಂಗ್ರಹಣೆ ಹೊಸ ಕಟ್ಟಡ ನಿರ್ಮಾಣಕ್ಕೆ ಪಣ ತೊಟ್ಟರು, ಅತ್ಯಂತ ಪ್ರಯಾಸದಿಂದ ಮೊದಲ ಹಂತ ಅಂದರೆ ಕೆಳ ಅಂತಸ್ತಿನ ಅತಿಥಿಗೃಹಗಳು, ಮೊದಲ ಅಂತಸ್ತಿನಲ್ಲಿ 40 ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಕಟ್ಟಡ ನಿರ್ಮಾಣ ಮುಗಿಸಿ, ಎರಡು ಹಾಗೂ ಮೂರನೇ ಮಹಡಿಗಳ ಹಾಸ್ಟೆಲ್ ಭಾಗ ಮತ್ತು ಊಟದ ಮನೆಯ ಮೇಲ್ಭಾಗದ ಸಭಾಂಗಣ ಕಾಮಗಾರಿಗಳನ್ನು ಅರ್ಧಕ್ಕೆ ನಿಲ್ಲಿಸಿ, 1996ರಲ್ಲಿ ವಾಸವಿ ಭವನದ ಉದ್ಘಾಟನೆ ಆಯಿತು. ಉದ್ಘಾಟನಾ ಸಮಾರಂಭದಲ್ಲಿ ಊಟೋಪಚಾರ ವ್ಯವಸ್ಥೆಯ ಪೂರ್ಣ ಜವಬ್ದಾರಿಯನ್ನು ಕರ್ನಾಟಕ ಆರ್ಯವೈಶ್ಯ ಯುವಜನ ಮಹಾಸಭೆ ತೆಗೆದುಕೊಂಡಿತ್ತು. ಅತ್ಯಂತ ಶಿಸ್ತು ಬದ್ಧವಾಗಿ ಊಟೋಪಚಾರ ವ್ಯವಸ್ಥೆಯನ್ನು ನಿರ್ವಹಿಸಿಕೊಟ್ಟ ಯುವಜನ ಮಹಾಸಭೆಯ ಮೇಲೆ ಹಿರಿಯ ಉಪಾಧ್ಯಕ್ಷರಾಗಿದ್ದ ಶ್ರೀ ತಲಂ ಶ್ರೀನಿವಾಸಮೂರ್ತಿಯವರು ಮಾಡಿದ ಘನಘೋರ ಅಪಾದನೆಯಿಂದ ಕಾರ್ಯಕರ್ತರು ಅಸಮಾಧಾನಗೊಂಡು ಕೆಲವು ಕ್ಷಣ ಪರಿಸ್ಥಿತಿ ಬಿಗಡಾಯಿಸಿದ್ದು ಈಗ ಇತಿಹಾಸ.

ಕರ್ನಾಟಕ ಆರ್ಯವೈಶ್ಯ ಮಹಾಸಭೆಗೆ ನೂತನ ಕಟ್ಟಡವೇನೋ ಬಂದಿತು. ಆರ್ಥಿಕ ಸುಧಾರಣೆ ಆಗಲಿಲ್ಲ, ಕಟ್ಟಡ ನಿರ್ಮಾಣಕ್ಕಾಗಿ ಕಾರ್ಯಕಾರಿ ಸಮಿತಿ ಸದಸ್ಯರಿಂದಲೇ ಬಡ್ಡಿ ರಹಿತ ಸಾಲವನ್ನು ಪಡೆಯಲಾಗಿತ್ತು. ಇನ್ನೂ ಕಾಮಗಾರಿಗಳು ಸಾಕಷ್ಟು ಬಾಕಿಯಿತ್ತು, ದಾನಿಗಳಿಂದ ಬರಬೇಕಿದ್ದ ವಾಗ್ದಾನಗಳು ಸಹ ನಿಧಾನವಾಗುತ್ತಿತ್ತು. ಇದೇ ಸಂದರ್ಭದಲ್ಲಿ ಮಹಾಸಭೆಯ 2ನೇ ಅವಧಿ ಮುಗಿದಿದ್ದು ಕಾರ್ಯಕಾರಿ ಸಮಿತಿಗೆ ಚುನಾವಣೆಗಳು ನಡೆಯಬೇಕಿತ್ತು. ಆದರೆ ಶ್ರೀ ಮೈಲಾಪುರ ಸುಬ್ರಮಣ್ಯಂರವರ ಅಧ್ಯಕ್ಷತೆಯಲ್ಲಿ **1996ರಲ್ಲಿ ಬಳ್ಳಾರಿ ನಗರದಲ್ಲಿ ಸರ್ವಸದಸ್ಯರ ಸಭೆ ನಡೆದು ಚುನಾವಣೆಗಳನ್ನೇ ನಡೆಸದೆ ಮತ್ತೊಂದು ಅವಧಿಗೆ ಕಾರ್ಯಕಾರಿ ಸಮಿತಿಯನ್ನು ಮುಂದುವರೆಸಲು** ನಡೆದ ಪ್ರಕ್ರಿಯೆಗೆ ಅಂದಿನ ಕರ್ನಾಟಕ ಆರ್ಯವೈಶ್ಯ ಯುವಜನ ಮಹಾಸಭೆ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುತ್ತಿದ್ದ ನಾನೂ ಹಾಗೂ ಮಾಜಿ ಅಧ್ಯಕ್ಷರಾಗಿದ್ದ ತುಮಕೂರು ಶ್ರೀ ಎಸ್.ಆರ್.ಶ್ರೀಧರ ಮೂರ್ತಿ, ಗಂಗಾವತಿಯ ಶ್ರೀ ಈಶ್ವರಶೆಟ್ಟಿರವರ ನೇತೃತ್ವದಲ್ಲಿ ಅತೀ ತೀವ್ರವಾದ ಹೋರಾಟ ನಡೆಯಿತು ಆದರೆ ಹೋರಾಟಗಾರರನ್ನು ಬಲವಂತವಾಗಿ ಸಭೆಯಿಂದ ಎತ್ತಿ ಹೊರಗೆ ಹಾಕುವ ಮೂಲಕ ಮತ್ತೊಂದು ಅವಧಿಗೆ **ಶ್ರೀ ಮೈಲಾಪುರ ಸುಬ್ರಮಣ್ಯಂರವರ ತಂಡವೇ ಚುನಾವಣೆಗಳು ಇಲ್ಲದಯೇ ಅಧಿಕಾರದಲ್ಲಿ ಮುಂದಿನ ಮೂರು ವರ್ಷಗಳಿಗೆ ಆಯ್ಕೆಯಾದರು.** ನಂತರದಲ್ಲಿ ಉದ್ಭವಿಸಿದ ತೀವ್ರ ಅಡಚಣೆಗಳು, ಅಸಮಾಧಾನಗಳು, ವಿರೋದಗಳಿಂದ ಆಡಳಿತ ಅಭಿವೃದ್ಧಿ ಕುಂಠಿತವಾಯಿತು. ಪುನಃ 1999ರಲ್ಲಿ ಮಹಾಸಭೆಯ ಕಾರ್ಯಕಾರಿ ಸಮಿತಿಗೆ 4ನೇ ಚುನಾವಣೆಗಳು ಎದುರಾಯಿತು. ಇಲ್ಲಿಂದಲೇ ಚುನಾವಣೆಗಳಲ್ಲಿ ಸಲ್ಲದ ಗುಂಪುಗಾರಿಕೆಗಳು, ಅಹಿತಕರ ಘಟನೆಗಳಿಗೆ ನಾಂದಿಯಾಯಿತು.

**ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು,**

**–ಆರ್ ಪಿ ರವಿಶಂಕರ್**
**ಅಧ್ಯಕ್ಷರು**

# ಅಭಿನಂದನೆಗಳು



ಶ್ರೀ ಮಾನಂದಿ ರಮೇಶ್

ಬೆಂಗಳೂರು ನಗರದ ಖ್ಯಾತ ವಾಣಿಜ್ಯೋದ್ಯಮಿ, ಸಮಾಜ ಸೇವಕರು ಹಾಗೂ ಹಿರಿಯ ದಾನಿಗಳು ಆಗಿರುವ ಶ್ರೀ ಮಾನಂದಿ ರಮೇಶ್‌ರವರ ಸೇವಾ ಕಾರ್ಯಕ್ರಮಗಳನ್ನು ಗಮನಿಸಿ **ಬಸವ ಪರಿಷತ್** ಸಂಸ್ಥೆಯ ವತಿಯಿಂದ 2025ರ **ಬಸವ ಪುರಸ್ಕಾರ** ಪ್ರಶಸ್ತಿಯನ್ನು ದಿನಾಂಕ: 9–8–2025ರಂದು ಬೆಂಗಳೂರು ನಗರದ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಪೀಠಾಧ್ಯಕ್ಷರಾದ ಪರಮಪೂಜ್ಯ ಶ್ರೀ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ನಿವೃತ್ತ ಲೋಕಾಯುಕ್ತರಾದ ಸನ್ಮಾನ್ಯ ಶ್ರೀ ಸಂತೋಷ್ ಹೆಗ್ಗಡೆ ಮತ್ತು ಕರ್ನಾಟಕ ಸರ್ಕಾರದ ಮಾಜಿ ಸಚಿವೆ ಹಾಗೂ ಖ್ಯಾತ ಚಲನಚಿತ್ರ ನಟಿ ಶ್ರೀಮತಿ ಉಮಾಶ್ರೀರವರ ಸಮ್ಮುಖದಲ್ಲಿ ನೀಡಿ ಗೌರವಿಸಲಾಯಿತು.

ಇವರ ಸೇವಾಕ್ಷೇತ್ರವು ಮತ್ತಷ್ಟು ವಿಶಾಲವಾಗಿ ಬೆಳೆದು ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಪ್ರಶಸ್ತಿಗಳನ್ನು ಪಡೆಯುವಂತಾಗಲಿ ಎಂದು ಕರ್ನಾಟಕ ಆರ್ಯವೈಶ್ಯ ಮಹಾಸಭೆಯು ಹರಸಿ, ಅಭಿನಂದಿಸುತ್ತದೆ.

# ಜಿಲ್ಲಾ ಸಮಾವೇಶಗಳು



ತುಮಕೂರು ಜಿಲ್ಲಾ ಸಮಾವೇಶದ ಉದ್ಘಾಟನೆಯ ಸಂದರ್ಭದಲ್ಲಿ ಮಹಾಸಭಾದ ಅಧ್ಯಕ್ಷರಾದ ಶ್ರೀ ಆರ್ ಪಿ ರವಿಶಂಕರ್ ಹಾಗೂ ಜಿಲ್ಲೆಯ ಪದಾಧಿಕಾರಿಗಳು

ದಿನಾಂಕ 18–7–2025ರ ಶುಕ್ರವಾರ ಬಳ್ಳಾರಿ ಜಿಲ್ಲಾ ಸಮಾವೇಶ ಶ್ರೀ ವಾಸವಿ ಟ್ರಸ್ಟ್ ಆಶ್ರಯದಲ್ಲಿ ಬಳ್ಳಾರಿ ನಗರದಲ್ಲಿ ಮತ್ತು ದಿನಾಂಕ 20–7–2025ರ ಭಾನುವಾರ ತುಮಕೂರು ಜಿಲ್ಲಾ ಸಮಾವೇಶವನ್ನು ಆರ್ಯವೈಶ್ಯ ಮಂಡಳಿ ತಿಪಟೂರು ಇವರ ಆತಿಥ್ಯದಲ್ಲಿ ನಡೆಸಲಾಯಿತು.

ಎರಡೂ ಜಿಲ್ಲಾ ಸಮಾವೇಶಗಳಲ್ಲಿ 500ಕ್ಕೂ ಮೀರಿದ ಪ್ರತಿನಿಧಿಗಳು ಭಾಗವಹಿಸಿ ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಅಧ್ಯಕ್ಷರೊಂದಿಗೆ ಸಂವಾದ ಸಂವಾದ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.



ಬಳ್ಳಾರಿ ಜಿಲ್ಲಾ ಸಮಾವೇಶ ಉದ್ಘಾಟನೆಯ ಸಂದರ್ಭದಲ್ಲಿ ಮಹಾಸಭಾದ ಅಧ್ಯಕ್ಷರಾದ ಶ್ರೀ ಆರ್ ಪಿ ರವಿಶಂಕರ್ ಹಾಗೂ ಜಿಲ್ಲೆಯ ಪದಾಧಿಕಾರಿಗಳು

# ವಿಶ್ವ ಆರ್ಯವೈಶ್ಯ ಸಮಾವೇಶ –GLOBAL ARYAVYSYA SUMMIT

ಈಗಾಗಲೇ ಹಿಂದಿನ ಸಂಚಿಕೆಯಲ್ಲಿ ತಿಳಿಸಿರುದಂತೆ **2026 ಡಿಸೆಂಬರ್ 24 ರಿಂದ 27** ರವರೆವಿಗೂ ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಆಶ್ರಯದಲ್ಲಿ ನಡೆಸಲು ಉದ್ದೇಶಿಸಿರುವ **ವಿಶ್ವ ಆರ್ಯವೈಶ್ಯ ಸಮಾವೇಶ**ದ ಪೂರ್ವ ಸಿದ್ಧತೆಗಳ ಬಗ್ಗೆ ಬೆಂಗಳೂರು ನಗರದ ಪ್ರತಿಷ್ಠಿತ ಉದ್ಯಮಿಗಳು, ಕೈಗಾರಿಕೋದ್ಯಮಿಗಳು, ವೃತ್ತಿಪರರು, ಇನ್ನೂ ಹಲವು ಕ್ಷೇತ್ರಗಳ ಪ್ರತಿಷ್ಠಿತರೊಂದಿಗೆ ದಿನಾಂಕ: 3–8–2025ರಂದು ಮಹಾಸಭೆಯ ಆವರಣದಲ್ಲಿರುವ ಬ್ಯಾಂಕ್ವೆಟ್ ಹಾಲ್‌ನಲ್ಲಿ **ಚಿಂತನ–ಮಂಥನ** ಸಭೆಯನ್ನು ನಡೆಸಲಾಯಿತು.



ವಿವಿಧ ವ್ಯಾಪಾರ, ವ್ಯವಹಾರ, ಉದ್ಯಮಗಳ 150ಕ್ಕೂ ಹೆಚ್ಚು ಪ್ರತಿಷ್ಠಿತರು ಸಭೆಯಲ್ಲಿ ಪಾಲ್ಗೊಂಡಿದ್ದು **GLOBAL ARYAVYSYA SUMMIT** ಆಲೋಚನೆಯ ಬಗ್ಗೆ ಅತೀವ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಲ್ಲದೆ ಪರಿಪೂರ್ಣ ಸಹಕಾರವನ್ನು ನೀಡುವುದಾಗಿ ತಿಳಿಸಿದರು.

## ಕುಲ ಬಾಂಧವರೇ... ನಿಮ್ಮ ಸಹಕಾರವೂ.... ಬೇಕು

ಆರ್ಯವೈಶ್ಯ ಸಮಾಜದ ಭವ್ಯ ಇತಿಹಾಸವನ್ನು ನಾಡಿನ ಜನತೆಗೆ ಪರಿಚಯಿಸುವ, ನಮ್ಮ ಸಮಾಜದ ಮೇಧಾವಿಗಳನ್ನು, ಗಣ್ಯಾತಿ ಗಣ್ಯರನ್ನು, ಸಾಧಕರನ್ನು ನಮ್ಮ ವಿಶಿಷ್ಟ ಬಗೆಯ ಖಾದ್ಯಗಳನ್ನು ಭವಿಷ್ಯದ ಪೀಳಿಗೆಗೆ ಪರಿಚಯಿವುದಲ್ಲದೆ, ವಿಶ್ವದಾದ್ಯಂತ ಇರುವ ನಮ್ಮ ಕುಲಬಾಂಧವರು ಅದರಲ್ಲೂ ವಿಶೇಷವಾಗಿ ಯುವಜನತೆ ವಿಶ್ವದ ಜಾಗತಿಕ ಮಾರುಕಟ್ಟೆಯ ನವೋದ್ಯಮಿಗಳಲ್ಲಿ ತೊಡಗಿಸಿಕೊಂಡು ಬೆಳೆಯಲು ನೂರಾರು ಅವಕಾಶಗಳನ್ನು ಕಲ್ಪಿಸುವ ಈ ಸಮಾವೇಶದ ಮಾಹಿತಿ ಪ್ರಪಂಚದಾದ್ಯಂತ ಇರುವ ಕುಲಬಾಂಧವರಿಗೆ ತಿಳಿಸಲು ನಿಮ್ಮ ಸಹಕಾರ ಬೇಕಿದೆ.

ನಿಮ್ಮ ಮಕ್ಕಳು/ನಿಮ್ಮ ಊರಿನ ಮಕ್ಕಳು/ಬಂಧುಗಳು/ಪರಿಚಯಸ್ಥರು ಯಾರೇ ಆದರೂ ದೇಶ/ವಿದೇಶಗಳಲ್ಲಿ ಎಲ್ಲೇ ನೆಲಸಿದ್ದರೂ ಸರಿ, ದಯವಿಟ್ಟು ಅವರ ಮಾಹಿತಿಗಳನ್ನು ಇಲ್ಲಿ ನಮೂದಿಸಿರುವ **QR** ಕೋಡ್ ಮೂಲಕ ನೋಂದಾಯಿಸಿ ಸಹಕರಿಸಿ, ಹೊರ ದೇಶಗಳಲ್ಲಿ ತಮಗೆ ತಿಳಿದಿರುವ ನಮ್ಮ ಸಮಾಜದ ಆರ್ಯವೈಶ್ಯ ಪ್ರತಿಷ್ಠಿತ ವ್ಯಕ್ತಿಗಳು (ಯಾವುದೇ ರಂಗದಲ್ಲಾದರೂ ಸರಿ), ಸಂಘ, ಸಂಸ್ಥೆಗಳ ಬಗ್ಗೆ ನಮ್ಮ ಮಹಾಸಭೆಗೆ ಮಾಹಿತಿಗಳನ್ನು ಜಾಗ್ರತೆಯಾಗಿ ನೀಡಿ ಸಮಾವೇಶದ ಯಶಸ್ಸಿಗೆ ಕೈಜೋಡಿಸಲು ಕೋರುತ್ತೇವೆ.

KAVMS

SCAN QR CODE FOR APPLICATION



# ಮೈಸೂರು ದಸರಾ ನೋಡಲು ಅಂದ
# ಮಹಾಸಭೆಯ ಅತಿಥಿಗೃಹ
# ವಿಶ್ರಾಂತಿಗೆ ಚೆಂದ



ಮೈಸೂರು ನಗರದಲ್ಲಿ ಮಹಾಸಭೆಯ ಸುಸಜ್ಜಿತ, ಹವಾ ನಿಯಂತ್ರಿತ ಕೊಠಡಿಗಳು ಹಾಗೂ ಸಾಮೂಹಿಕ ವಸತಿ (Dormitory)

**ಮುಂಗಡ ಬುಕಿಂಗ್‌ಗಾಗಿ ಸಂಪರ್ಕಿಸಿ: 77608 16939**

ನಂ. 2936/2, ಎಲ್–16/1, ಗೀತಾ ಮಂದಿರ, ದಾವೂದ್ ಖಾನ್ ರಸ್ತೆ,
ಲಸ್ಕರ್ ಮೊಹಲ್ಲಾ, ಮೈಸೂರು–570001

KAVMS

SCAN FOR GET LOCATION




### ಆರ್ಯವೈಶ್ಯ ಧರ್ಮ ಪ್ರವರ್ತಕ ಹಾಗೂ ಆರ್ಯವೈಶ್ಯ ಕುಲೋದ್ಧಾರಕ
## ಬ್ರಹ್ಮಶ್ರೀ ಆತ್ಮೂರಿ ಲಕ್ಷ್ಮೀ ನರಸಿಂಹ ಸೋಮಯಾಜಿಗಳವರ
## 181ನೇ ಜಯಂತ್ಯೋತ್ಸವ

ಕೃಷ್ಣಾಷ್ಟಮಿ ಅಂದರೇ ದಿ. 16/08/2025 ರ ಶನಿವಾರ ಮಹಾಸಭೆಯ ಕಚೇರಿಯಲ್ಲಿ ಅತ್ಯಂತ ಭಕ್ತಿಪೂರ್ವಕವಾಗಿ ಆಚರಿಸಿ ಶ್ರೀ ಆತ್ಮಕೂರೀರವರ ಅಸಾಧಾರಣ ವ್ಯಕ್ತಿತ್ವದ ಬಗ್ಗೆ ಜಾಗೃತಿ ಮೂಡಿಸಲಾಯಿತು.

## ವಾಸವಿ ಸಿರಿ ಹಾಗೂ ಸ್ವರ್ಣದಂಪತಿಗಳ ವಿಶೇಷ ಕಾರ್ಯಕ್ರಮ



ವಾಸವಿ ಸಿರಿ ಪ್ರಶಸ್ತಿ ಸ್ವೀಕರಿಸುತ್ತಿರುವ ಸಾದಕರು
ಶ್ರೀ ರಾಂಪ್ರಸಾದ್ ಕೆ ವಿ, ಶ್ರೀ ಭಾಸ್ಕರ ಶೆಟ್ಟಿ, ಡಾ॥ ಅನುಷಾ ಆರ್ ಗುಪ್ತ

ಬೆಂಗಳೂರು ಮಹಾನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ 96ಕ್ಕೂ ಮೀರಿದ ಆರ್ಯವೈಶ್ಯ ಮಂಡಳಿಗಳ ಸಂಘಟನಾ ಕೇಂದ್ರ **ಬೆಂಗಳೂರು ಆರ್ಯವೈಶ್ಯ ಮಂಡಳಿಗಳ ಒಕ್ಕೂಟ** ಸಂಸ್ಥೆಯ ಆಶ್ರಯದಲ್ಲಿ ಪ್ರತಿ ವರ್ಷವು ಹಲವಾರು ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಮಹಾನಗರದಲ್ಲಿ ಆರ್ಯವೈಶ್ಯರ ಸಂಘಟನೆಗೆ ಕಾರ್ಯನಿರ್ವಹಿಸುತ್ತಿದೆ. ಈ ಕಾರ್ಯಕ್ರಮದಲ್ಲಿ ಬಹು ಮುಖ್ಯವಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಾಧಕರನ್ನು ಗುರುತಿಸಿ **ವಾಸವಿ ಸಿರಿ** ಪ್ರಶಸ್ತಿ ಪ್ರಧಾನ ಮಾಡಲಾಗುತ್ತದೆ. ಮತ್ತು 50ವರ್ಷಗಳ ಸುದೀರ್ಘ ದಾಂಪತ್ಯ ಜೀವನ ನಡೆಸಿರುವ ದಂಪತಿಗಳನ್ನು ಗುರುತಿಸಿ ಸ್ವರ್ಣದಂಪತಿಗಳು ಕಾರ್ಯಕ್ರಮ ನಡೆಸಿಕೊಂಡು ಬಂದಿದೆ. ದಿನಾಂಕ 1–8–2025ರ ಶುಕ್ರವಾರ 17ನೇ ವರ್ಷದ ವಾಸವಿ ಸಿರಿ ಪ್ರಶಸ್ತಿಯನ್ನು, **10 ಸಾಧಕರಿಗೆ** ನೀಡಿ ಗೌರವಿಸಲಾಯಿತು. 10ನೇ ವರ್ಷದ ಸ್ವರ್ಣದಂಪತಿಗಳ ಕಾರ್ಯಕ್ರಮದಲ್ಲಿ **56 ದಂಪತಿಗಳನ್ನು** ಅತ್ಯಂತ ಗೌರವಪೂರ್ಣವಾಗಿ ಅಭಿನಂದಿಸಲಾಯಿತು.

ಶ್ರೀ ವಾಸವಿ ಪೀಠದ ಪೀಠಾಧ್ಯಕ್ಷರಾದ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಯವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮಹಾಸಭೆ ಅಧ್ಯಕ್ಷರಾದ ಶ್ರೀ ಆರ್ ಪಿ ರವಿಶಂಕರ್‌ರವರು ಮುಖ್ಯ ಆಹ್ವಾನಿತರಾಗಿ ಭಾಗವಹಿಸಿದ್ದರು. ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗಮಹೇಶ್ ಅಧ್ಯಕ್ಷತೆ ವಹಿಸಿದ್ದರು.




ದಾಂಪತ್ಯ ಜೀವನದ ೫೦ ವಸಂತಗಳನ್ನು ಕಳೆದಿರುವ ದಂಪತಿಗಳು

Application Last date 31st October 2025

# ರಾಜ್ಯ ಮಟ್ಟದ 15ನೇ ಪ್ರತಿಭೋತ್ಸವ-2025



### ಕರ್ನಾಟಕ ರಾಜ್ಯ ಆರ್ಯವೈಶ್ಯ ಪ್ರತಿಭಾವಂತ ವಿದ್ಯಾರ್ಥಿಗಳಿಂದ
## ಅರ್ಜಿ ಆಹ್ವಾನ – ಆನ್‌ಲೈನ್‌ನಲ್ಲಿ

ಆತ್ಮೀಯ ಕುಲಬಾಂಧವರೇ,

2024–25ನೇ ಶೈಕ್ಷಣಿಕ ವರ್ಷದ ಪರೀಕ್ಷೆಗಳಲ್ಲಿ ಎಸ್‌ಎಸ್‌ಎಲ್‌ಸಿ, 2ನೇ ಪಿಯುಸಿ, ಡಿಗ್ರಿ ಹಾಗು ಉನ್ನತ ಪರಿಕ್ಷೆಗಳಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದು ಸಮಾಜದ ಕೀರ್ತಿಯನ್ನು ಬೆಳಗಿರುವ ಸಮಸ್ತ ವಿದ್ಯಾ ಮಾಣಿಕ್ಯಗಳನ್ನು ಅಭಿನಂದಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

KAVMS

SCAN QR CODE FOR APPLICATION

**ಅರ್ಜಿಗಳನ್ನು ಕಳುಹಿಸಲು ಕೊನೆಯ ದಿನಾಂಕ – 31.10.2025**

ಅರ್ಜಿಗಳನ್ನು ಪಡೆಯಲು www.kavms.com ಭೇಟಿ ಮಾಡಿ

suvarna news

ಕನ್ನಡಪ್ರಭ

## ಕರ್ನಾಟಕ ಆರ್ಯವೈಶ್ಯ ಮಹಾಸಭಾ(ರಿ)
## ರಾಜ್ಯ ಮಟ್ಟದ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ
## ವಾಸವಿ ಎಕ್ಸಲೆನ್ಸ್ ಅವಾರ್ಡ್ಸ್–2025

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31.10.2025

ಹೆಚ್ಚಿನ ವಿವರಗಳಿಗಾಗಿ Qr Code ಸ್ಕ್ಯಾನ್ ಮಾಡಿ

KAVMS

ADTV



ವಿಶಾಲವಾದ- ಸುಸಜ್ಜಿತವಾದ-ಸಂಪೂರ್ಣ ಸೌಲಭ್ಯಗಳುಳ್ಳ

# ವಾಸವಿ ವೈದಿಕ ಭವನ



ರಾ ಪ ರವಿಶಂಕರ್
ಕಾರ್ಯದರ್ಶಿಗಳು, ಮಲ್ಲೇಶ್ವರಂ ಆರ್ಯವೈಶ್ಯ ಸಂಘ (ರಿ)
ವಾಸವಿ ವೇದ ನಿಧಿ ಟ್ರಸ್ಟ್

ಶ್ರೀ ಕನ್ಯಾಕಾಪರಮೇಶ್ವರಿ ದೇವಸ್ಥಾನ
ವೆಸ್ಟ್ ಪಾರ್ಕ್ ರಸ್ತೆ, 8ನೇ ಅಡ್ಡ ರಸ್ತೆ, ಮಲ್ಲೇಶ್ವರಂ ಬೆಂಗಳೂರು.03
ವಿವರಗಳಿಗೆ ಸಂಪರ್ಕಿಸಿ
080–23468241 ಮೊ.ನಂ, 8197514595

SCAN FOR GET LOCATION

SCAN FOR GET LOCATION

## ಪಶ್ಚಿಮ ವಾಹಿನಿ, ಶ್ರೀರಂಗಪಟ್ಟಣ

ವಿವರಗಳಿಗೆ ಸಂಪರ್ಕಿಸಿ
ಮೊ.ನಂ, 9611417830 / 7019844830

## ಜಯನಗರ, ಬೆಂಗಳೂರು

ವಿವರಗಳಿಗೆ ಸಂಪರ್ಕಿಸಿ
ಮೊ.ನಂ: 9448735614 / 9844046559
9148979741 / 080–22440077

SCAN FOR GET LOCATION

ಈ ಸಂಖ್ಯೆಗಳನ್ನು ಸೇವ್ ಮಾಡಿಕೊಂಡು ಅವಶ್ಯಕತೆ ಇದ್ದಾಗ/ಅವಶ್ಯಕತೆ ಇರುವವರಿಗೆ ತಿಳಿಸಿ

SATHYA PARVA CHITS (PVT) LTD BENGALURU

ನಾಲ್ಕು ದಶಕಗಳ ಸುಧೀರ್ಘ ಸೇವೆಯಲ್ಲಿ

## ಸತ್ಯಪರ್ವ ಚಿಟ್ಸ್ (ಪ್ರೈ) ಲಿ.

## SATHYAPARVA CHITS (P) LTD.

No.108, Sri Chakra, Ist floor, East Park Road, 8th cross, Malleshwaram, Bengaluru- 560 003.
Email: sathyaparva@gmail.com



ಸಾವಿರಾರು ಸಂತೃಪ್ತ ಗ್ರಾಹಕರು
ನಿಮ್ಮ ಭವಿಷ್ಯದ ಉಳಿತಾಯ ನಮ್ಮೊಂದಿಗೆ
ಒಂದು ಲಕ್ಷದಿಂದ ಒಂದು ಕೋಟಿಯವರೆಗೆ

## ನಮ್ಮ ಹೊಸ ಚೀಟಿ ಗ್ರೂಪ್‌ಗಳು

| Sl. No. | Chit Value ಚೀಟಿ ಮೌಲ್ಯ | Duration ಅವಧಿ | Monthly Instalments ಮಾಸಿಕ ಕಂತಿನ ಹಣ |
|---|---|---|---|
| 1. | Rs. 5,00,000 | 20 months | Rs. 25,000 P.M |
| 2. | Rs 10,00,000 | 20 months | Rs. 50,000 P. M |
| 3. | Rs 20,00,000 | 20 months | Rs. 100,000 P.M |
| 4. | Rs. 50,00,000 | 20 months | Rs. 250,000 P.M |

ರಾಜ್ಯಾದ್ಯಂತ ವ್ಯಾಪಾರ ಅಭಿವೃದ್ಧಿ ಏಜೆಂಟರು ಬೇಕಾಗಿದ್ದಾರೆ
ಆಕರ್ಷಕ ಕಮಿಷನ್ ನೀಡಲಾಗುತ್ತದೆ

CONTACT US:
080-41525190 | 9886485777



R.S.RAJESH
Executive Director

R.P.RAVISHANKAR
Managing Director

GROW TOGETHER

## Vasavi MSCM CO-OP BANK LTD



ಆರ್ ಪಿ ರವಿಶಂಕರ್
ಅಧ್ಯಕ್ಷರು

No. 6 Hospital Road, Bengaluru - 560053.
Tel: 2225 3389, 2226 8535

57 ವರ್ಷಗಳ ನಿರಂತರ ಬ್ಯಾಂಕಿಂಗ್ ಸೇವೆಯಲ್ಲಿ

ನಿಮ್ಮ ಕನಸು ನನಸಾಗಿಸಲು

- ವಾಹನ ಸಾಲ ಶೇಕಡ 8.5ರ ಬಡ್ಡಿ ದರದಲ್ಲಿ
- ಚಿನ್ನಾಭರಣ ಸಾಲ ಶೇಕಡಾ 9
- ಗೃಹ ನಿರ್ಮಾಣ ಸಾಲ ಕೇವಲ 8.5

ಠೇವಣಿಗಳ ಮೇಲೆ ಗರಿಷ್ಠ
8.5
ರಷ್ಟು ಗಳಿಸಿ
(ವಿಮಾ ಸೌಲಭ್ಯವಿದೆ)

ನಿಮ್ಮ ಕಷ್ಟಾರ್ಜಿತ ಹಣಕ್ಕೆ ಸೂಕ್ತವಾದ ಭದ್ರವಾದ ಮತ್ತು ಅತ್ಯುತ್ತಮವಾದ ಆದಾಯ

ನಿಮ್ಮ ಅವಶ್ಯಕತೆಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಪಡೆಯಿರಿ
ವಿವರಗಳಿಗೆ ಸಂಪರ್ಕಿಸಿ

ಆರ್ ಪಿ ರವಿಶಂಕರ್ – ಅಧ್ಯಕ್ಷರು
ವೈ ಎ ಹರಿಕಿಶೋರ್ – ಉಪಾಧ್ಯಕ್ಷರು
ಬಿ ಎ ಕೃಷ್ಣ ಭಗವಾನ್ – ಸಿಇಓ

ADTV



ಮುದ್ರಕರು: ಗಿರೀಶ್ ಪ್ರಿಂಟರ್ಸ್, ನಂ.161/2, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020 ಇ–ಮೇಲ್ : info@gireeshprinters.com website : www.gireeshprinters.com
ಸಂಪಾದಕರು ಮತ್ತು ಪ್ರಕಾಶಕರು: ರಾ ಪ ರವಿಶಂಕರ್ ಕರ್ನಾಟಕ ಆರ್ಯವೈಶ್ಯ ಮಹಾಸಭಾ ಪರವಾಗಿ, 16, ಶೇಷಾದ್ರಿರಸ್ತೆ, ಗಾಂಧಿನಗರ, ಬೆಂಗಳೂರು–09 ಫೋನ್: 22206151/22206152